ಕ್ರ ಸಂ.	ಲೆಕ್ಕ ಶೀರ್ಷಿಕೆ	ಒದಗಿಸಲಾದ ಮೊತ್ತ
1	2250–00–800–1–03–(101) ದೇವಸ್ಥಾನಗಳು ಮತ್ತು ಇತರೆ ಧಾರ್ಮಿಕ ಸಂಸ್ಥೆಗಳ ಸಹಾಯಾನುದಾನ	ರೂ.20.00 ಕೋಟಿ
2	2250–00–800–1–03 (200) ದೇವಸ್ಥಾನಗಳು ಮತ್ತು ಇತರೆ ಧಾರ್ಮಿಕ ಸಂಸ್ಥೆಗಳು – ನಿರ್ವಹಣೆ	ರೂ.15.00 ಕೋಟಿ
	ಒಟ್ಟು	**ರೂ.35.00 ಕೋಟಿ**

ಆ) ಇರುವುದಿಲ್ಲ.

ದೇವಸ್ಥಾನಗಳ ಜೀರ್ಣೋದ್ಧಾರಕ್ಕಾಗಿ ಮಂಜೂರಾದ ಹಣ

809 ಶ್ರೀ ಅಶ್ವಥ್ ಎಂ.ಸಿ. (ಚನ್ನಪಟ್ಟಣ ಕ್ಷೇತ್ರ) : ಮಾನ್ಯ ಗೃಹ ಹಾಗೂ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಚನ್ನಪಟ್ಟಣ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮುಜರಾಯಿ ದೇವಸ್ಥಾನಗಳ ಜೀರ್ಣೋದ್ಧಾರ ಮತ್ತು ಅಭಿವೃದ್ಧಿಗೆ 2009–10 ರಲ್ಲಿ ಮಂಜೂರಾದ ಹಾಗೂ ಖರ್ಚಾದ ಹಣವೆಷ್ಟು;

ಆ) ಗುರುತಿಸಲಾಗಿರುವ ದೇವಸ್ಥಾನಗಳ ಸಂಖ್ಯೆ ಎಷ್ಟು; (ಗ್ರಾಮವಾರು ಮಾಹಿತಿ ನೀಡುವುದು)?

ಶ್ರೀ ಡಾ: ವಿ.ಎಸ್. ಆಚಾರ್ಯ (ಗೃಹ ಹಾಗೂ ಮುಜರಾಯಿ ಸಚಿವರು) :

ಅ) 2009–10ನೇ ಸಾಲಿನಲ್ಲಿ ಚನ್ನಪಟ್ಟಣ ವಿಧಾನಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ಬರುವ ಮುಜರಾಯಿ ದೇವಾಲಯಗಳ ಜೀರ್ಣೋದ್ಧಾರ ಮತ್ತು ಅಭಿವೃದ್ಧಿಗಾಗಿ ಯಾವುದೇ ಅನುದಾನ ಮಂಜೂರು ಮಾಡಿರುವುದಿಲ್ಲ.

ಆ) ಗುರುತಿಸಲಾಗಿರುವ ದೇವಸ್ಥಾನಗಳ ಸಂಖ್ಯೆ ಎಂಟು. ವಿವರ ಕೆಳಕಂಡಂತಿದೆ.

ಕ್ರ.ಸಂ.	ದೇವಾಲಯದ ಹೆಸರು ಮತ್ತು ಗ್ರಾಮ
1)	ಶ್ರೀ ಅಪ್ರಮೇಯ ದೇವಸ್ಥಾನ, ಮಳೂರು
2)	ಶ್ರೀ ಕೆಂಗಲ್ ಆಂಜನೇಯಸ್ವಾಮಿ ದೇವಸ್ಥಾನ, ವಂದಾರಗುಪ್ಪೆ, ಕಸಬಾ ಹೋಬಳಿ
3)	ಶ್ರೀ ಬಸವೇಶ್ವರಸ್ವಾಮಿ ದೇ. ಗುಡ್ಡೆ ತಿಮ್ಮಸಂದ್ರ
4)	ಶ್ರೀ ಸೋಮೇಶ್ವರಸ್ವಾಮಿ ದೇ. ಹಿಗ್ಗಲೂರು
5)	ಶ್ರೀ ವೀರಭದ್ರಸ್ವಾಮಿ ದೇ. ಯಡಿಯೂರು
6)	ಶ್ರೀ ಆಂಜನೇಯಸ್ವಾಮಿ ದೇ. ಚಿಕ್ಕೇನಹಳ್ಳಿ
7)	ಶ್ರೀ ಬಸವೇಶ್ವರಸ್ವಾಮಿ ದೇ. ಸುಳ್ಳೇರಿ
8)	ಶ್ರೀ ಆಂಜನೇಯಸ್ವಾಮಿ ದೇ. ದಶವಾರ

602 ಶ್ರೀ ಬಿ.ಸಿ.ಪಾಟೀಲ್ : ಮಾನ್ಯ ಲೋಕೋಪಯೋಗಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿರಿಕೆರೂರಿನ ಲೋಕೋಪಯೋಗಿ ಇಲಾಖೆಯಲ್ಲಿ 3 ಸಹಾಯಕ ಅಭಿಯಂತರರು, 1 ಕಿರಿಯ ಅಭಿಯಂತರರ ಹುದ್ದೆಗಳು, ಹಲವು ದಿನಗಳಿಂದ ಖಾಲಿ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ರಾಜ್ಯದಲ್ಲಿನ ಲೋಕೋಪಯೋಗಿ ಇಲಾಖೆಯಲ್ಲಿ ಮಂಜೂರಾದ ತಾಂತ್ರಿಕ ಹುದ್ದೆಗಳೆಷ್ಟು, ಕಾರ್ಯನಿರ್ವಹಿಸುತ್ತಿರುವ ಹುದ್ದೆಗಳೆಷ್ಟು, ಹಾಗೂ ಖಾಲಿ ಇರುವ ಹುದ್ದೆಗಳೆಷ್ಟು;

ಇ) ಲೋಕೋಪಯೋಗಿ ಇಲಾಖೆಯಲ್ಲಿ ಖಾಲಿ ಇರುವ SE, EE, AEE, AE & JE ಹುದ್ದೆಗಳನ್ನು ಭರ್ತಿ ಮಾಡುವ ವಿಚಾರ ಸರ್ಕಾರದ ಗಮನದಲ್ಲಿಯೇ;

ಶ್ರೀ ಸಿ.ಎಂ.ಉದಾಸಿ (ಲೋಕೋಪಯೋಗಿ ಸಚಿವರು) :

ಅ) ಹೌದು.